Providing of Mid-day Meals.

*Q.—19. Sri B. J. LINGE GOWDA (Channapatna).—

Will the Minister for Revenue be pleased to state :—

(*a*) what action has been taken for providing Mid-day meals to the needy School-going children, expectant mothers in Channapatna taluk as per Government Order ;

(*b*) whether all the villages of Channapatna taluk and town are covered by this Scheme ?

A.—Sri M. V. KRISHNAPPA (Minister for Revenue).—

(*a*) Mid-day meals are being provided to School going children. Expectant mothers are also included in the list of beneficiaries attending the Emergency Feeding Centres. There are 32 such centres in the Taluk.

(*b*) No.

ಶ್ರೀ ಬಿ. ಜೆ. ಲಿಂಗೇಗೌಡ.—ಸರ್ಕಾರದ ಆದೇಶದ ಮೇರೆಗೆ ಚನ್ನಪಟ್ಟಣ ತಾಲ್ಲೂಕಿನಲ್ಲಿ ಶಾಲಾ ಮಕ್ಕಳಿಗೆ ಗರ್ಭಿಣಿಯರಿಗೆ ಮಧ್ಯಾಹ್ನದ ಊಟವನ್ನು ಒದಗಿಸಲು ಏನು ಏರ್ಪಾಡು ಮಾಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಭಾವ ಪ್ರಾರಂಭವಾದ ಮೇಲೆ ನಿರ್ಗತಿಕರಾದಂಥ ಮಕ್ಕಳಿಗೂ ಗರ್ಭಿಣಿ ಸ್ತ್ರೀಯರಿಗೂ ಮುದುಕರಿಗೂ ಸ್ವಲ್ಪ ಮಧ್ಯಾಹ್ನದ ಫಲಹಾರದ ರೂಪದಲ್ಲಿ ಕೊಟ್ಟರೆ ಒಳ್ಳೆಯದು ಎನ್ನುವ ದೃಷ್ಟಿಯಿಂದ ಕೇರ್ ಸಂಸ್ಥೆಯವರು ಸಹಾಯ ಮಾಡಿದ್ದಾರೆ. ಆದ್ದರಿಂದ ಈಗಾಗಲೇ ಈ ಕೆಲಸ ಮಾಡುತ್ತಾ ಇರುವ ಕಡೆ ಅವರಿಗೆ ನಮ್ಮ ಸಹಾಯ ಕೊಟ್ಟು ಸುಮಾರು 8 ಲಕ್ಷ ಮಕ್ಕಳಿಗೂ ಮತ್ತು ನಿರ್ಗತಿಕರಿಗೂ 6 ತಿಂಗಳಿಂದ ಮಧ್ಯಾಹ್ನದ ಊಟದ ಏರ್ಪಾಡನ್ನು ಮಾಡಿಕೊಂಡು ಬಂದಿದೆ.

ಶ್ರೀ ಬಿ. ಜೆ. ಲಿಂಗೇಗೌಡ.—ತಮ್ಮ ಉತ್ತರದಲ್ಲಿ ಹೇಳಿದ್ದೀರಿ. 32 ಕೇಂದ್ರಗಳಲ್ಲಿ ಓದುತ್ತಾ ಇರುವ ಮಕ್ಕಳಿಗೂ ಮತ್ತು ಗರ್ಭಿಣಿಯರಿಗೂ ಆಹಾರವನ್ನು ಒದಗಿಸುತ್ತೇವೆ ಎಂದು ಹೇಳಿದಿರಿ. ಅವಶ್ಯಕತೆ ಇರುವ ಎಲ್ಲಾ ಗರ್ಭಿಣಿಯರಿಗೂ ಆಹಾರವನ್ನು ಒದಗಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಚನ್ನಪಟ್ಟಣ ತಾಲ್ಲೂಕಿನಲ್ಲಿ 32 ಕೇಂದ್ರಗಳು ಇವೆ. ಅಲ್ಲಿಗೆ ಯಾರು ಯಾರು ಬರುತ್ತಾರೋ ಅವರಿಗೆ ಆಹಾರವನ್ನು ಕೊಡಿ ಎಂದು ಹೇಳಿದ್ದೇವೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ 145 ಹಳ್ಳಿಗಳು ಇವೆ. ಎಲ್ಲಾ ಹಳ್ಳಿಗಳಲ್ಲೂ ನಡೆಸುವುದಕ್ಕೆ ಏರ್ಪಾಡು ಮಾಡಿಲ್ಲ. ಎಲ್ಲೆಲ್ಲ ಮಿಡರ್ ಸ್ಕೂರ್‌ಗಳು ಇವೆಯೋ ಎಲ್ಲೆಲ್ಲಿ ಕೇರ್ ಸಂಸ್ಥೆಯವರು ನಡೆಸುತ್ತಾ ಇದ್ದಾರೋ ಅಂತಹ ಕಡೆ ಈ ಜನತೆಯನ್ನು ಉಪಯೋಗಿಸಿಕೊಂಡು ನಮ್ಮ ಸಹಾಯ ಕೊಟ್ಟು ನಡೆಸಿಕೊಂಡು ಬರುತ್ತಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡ.—ನವಂಬರ್ ತಿಂಗಳವರೆಗೆ ಒದಗಿಸುತ್ತೇವೆಂದು ಹೇಳಿದಿರಿ. ಈ ಸಂಬಂಧದಲ್ಲಿ ಕೇರ್ ಸಂಸ್ಥೆಗೆ ತಗಲತಕ್ಕ ವೆಚ್ಚವನ್ನು ಮೈನೂರು ಸರ್ಕಾರ ವಹಿಸಿಕೊಳ್ಳುತ್ತೇವೆ ಎಂದು ಹೇಳಿದಿರಿ. ಒಂದು ಇನ್‌ಸ್ಟಾರ್‌ಮೆಂಟ್ ಕೊಟ್ಟು ಉಳಿಕೆ ಹಣ ಇದುವರೆಗೂ ಪಾವತಿ ಮಾಡಲಲ್ಲ. ಏತಕ್ಕೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಿಡ್ಡೇಮೀಲ್ಸ್ ನಡೆಯಬೇಕಾದರೆ 8 ಲಕ್ಷ ಮಕ್ಕಳಿಗೆ ದಿವಸಕ್ಕೆ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆ. 200 ದಿವಸದಿಂದ ನಡೆಸುತ್ತಾ ಇದ್ದೇವೆ. 2 ಕೋಟಿ ರೂಪಾಯಿ ಖರ್ಚಾಗಿದೆ. ಕೇಂದ್ರ ಸರ್ಕಾರದವರು ನಮಗೆ ಕೊಟ್ಟ 4 ಸಾವಿರ ಟನ್ ಮಿರ್ಕ್ ಪೌಡರ್ ಮತ್ತು ಗೋಧಿ ಮುಂತಾದವನ್ನು ಎಲ್ಲಾ ಸೇರಿಸಿ ಮತ್ತು ಕೇರ್ ಸಂಸ್ಥೆಯವರು ಕೊಟ್ಟಿರುವ ರವೆ, ಕಾರನ್‌ಫ್ಲೋರ್ ಮುಂತಾದವನ್ನು ಉಪಯೋಗಿಸಿ ನಡೆಸಿಕೊಂಡು ಬಂದಿದ್ದೇವೆ. ಅದು ಅಲ್ಲದೆ ಅಡಿಗೆ ಮಾಡುವುದು ಇಂತಹ ಚಾಕರಿಗೋಸ್ಕರ ಒಂದು ಹುಡುಗನಿಗೆ ದಿವಸ ಒಂದಕ್ಕೆ 1½ ಪೈಸೇ ಹಣ ಕೊಡಬೇಕು. ಈಗಾಗಲೇ 10 ಲಕ್ಷ ಕೊಟ್ಟಿದ್ದೇವೆ. ಮುಗಿದ ಮೇಲೆ ಬರ್ ಮಾಡುತ್ತಾರೆ, ಆದನ್ನು ಕೊಡುತ್ತೇವೆ.

ಶ್ರೀ ಜಿ. ರಾಮೇಗೌಡ.—ಈ ಒಂದು ಆಹಾರದ ವ್ಯವಸ್ಥೆಯನ್ನು ಎಷ್ಟು ತಿಂಗಳಕಾಲ ಮುಂದು ವರಿಸುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಅಭಾವ ಪ್ರಾರಂಭ ವಾದಾಗ ಇದನ್ನು ಪ್ರಾರಂಭ ಮಾಡಿದ್ದೇವೆ. ಅನೇಕ ಗ್ರಾಮಗಳಿಗೆ ಇದರಿಂದ ಸಹಾಯವಾಯಿತು. ಮುಂದುವರಿಸುವ ಇಷ್ಟ ಒಳ್ಳೆಯದಾಗಿದ್ದರೂ ಹಣ ಇಲ್ಲ. ಆದುದರಿಂದ ನವಂಬರ್ 30ನೇ ತಾರೀ ಖಿಗೆ ಇದನ್ನು ಮುಕ್ತಾಯ ಮಾಡುತ್ತೇವೆ.

ಶ್ರೀ ಜಿ. ವಿ. ಗೌಡ.—ನರ್ಕಾರದವರು ಕೊಟ್ಟಂಥ ಸಹಾಯ ಕೇರ್ ಸಂಸ್ಥೆಯವರು ಎಲ್ಲೆಲ್ಲ ಈ ಏರ್ಪಾಡನ್ನು ನಡೆಸುತ್ತಿದ್ದಾರೆಯೋ ಅಂತಹ ಗ್ರಾಮಗಳಿಗೆ ಮಾತ್ರ ಕೊಡಲಾಗಿದೆ. ಇನ್ನೂ ಅನೇಕ ಗ್ರಾಮಗಳಿಗೆ ಸಹಾಯ ಸಿಕ್ಕಲಿಲ್ಲ ಎನ್ನುವುದು ತಮಗೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಿಜ. ಕೇರ್ ಸಂಸ್ಥೆಯವರು ಯಾವ ಶಾಲೆಗಳಲ್ಲಿ ಈ ಏರ್ಪಾ ಡನ್ನು ನಡೆಸುತ್ತಿದ್ದಾರೋ ಆ ಶಾಲೆಗಳಲ್ಲಿ ಪ್ರಾರಂಭವಾಯಿತು. ಎಲ್ಲೆಲ್ಲಿ ಹೊಸದಾಗಿ ಬೇಕಾದರೆ ಅಲ್ಲೂ ಪ್ರಾರಂಭ ಮಾಡಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಕೆಲವು ಸಂದರ್ಭಗಳಲ್ಲ ಅವರು ಹೊಸ ಪ್ರದೇಶಗಳಿಗೆ ಹೋದರು. ಇನ್ನು ಕೆಲವು ಸಂದರ್ಭಗಳಲ್ಲಿ ಹೋಗಲಿಲ್ಲ.

ಶ್ರೀ ಕೆ. ವಿ. ಬೈರೇಗೌಡ.—ಮಧ್ಯಾಹ್ನದ ಊಟ ಎಲ್ಲ ಊರುಗಳಿಗೂ ಬೇಕಾಗುತ್ತದೆ. ಇದನ್ನು ಸಾಗಿಸಲು ಈಗಿರುವ ವ್ಯವಸ್ಥೆಯನ್ನು ಇನ್ನೂ ಉತ್ತಮಪಡಿಸಿದರೆ ಎಲ್ಲ ಕಡೆಗಳಿಗೂ ಇವು ಜನರಿಗೆ ಸಿಕ್ಕಲು ಅನುಕೂಲವಾಗುತ್ತದೆಯಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹಿಂದೆ ಕೇರ್ ಸಂಸ್ಥೆಗಳ ಮೂಲಕ ಇವೆಲ್ಲ ನರಬರಾಜು ಆಗು ತ್ತಿತ್ತು. ನಾವೂ ಕೂಡ ಅದೇ ಏಜನ್ಸಿ ಮೂಲಕವೇ ಕೆಲವು ಹುಡುಗರನ್ನುಪಯೋಗಿಸಿಕೊಂಡು ಹೆಂಚುವ ಏರ್ಪಾಡು ಮಾಡುತ್ತಿದ್ದೇವೆ. ಮೊದಲು ಇದ ಎಜುಕೇಷನ್ ಲಾಖೆ ಮೂಲಕ ನಡೆ ಯುತ್ತಿತ್ತು. ಈಗ ನಾವು ಕೂಡ ಅದೇ ಏಜನ್ಸಿ ಮೂಲಕ ಹಂಚುತ್ತಿದ್ದೇವೆ. ಸ್ಕೂಲು ಹುಡುಗರಲ್ಲಿ ಒಬ್ಬರನ್ನು ಅಡಿಗೆಯ ಕೆಲಸಕ್ಕಾಗಿ ನೇಮಿಸಿಕೊಳ್ಳುವಾಗ ಅವರಿಗೆ ಒಂದು ದಿನಕ್ಕೆ ಒಬ್ಬರಿಗೆ ಕೊಡಲು ಒಂದೂವರೆ ನಯಾಪೈಸೆದಂತೆ ಸಹಾಯ ಮಾಡಬೇಕೆಂದು ನಾವು ರೆಕ್ಕಾಚಾರ ಮಾಡಿ ಕೊಡುತ್ತಿದ್ದೇವೆ. ಇದೇ ಸುಮಾರು ಒಂದು ದಿನಕ್ಕೆ ಒಂದು ಲಕ್ಷ ರೂಪಾಯಿಗಳಷ್ಟು ಖರ್ಚು ಬರುತ್ತದೆ. ಈಗಾಗಲೇ ಸುಮಾರು ಹತ್ತು ಲಕ್ಷದಷ್ಟು ಹಣ ಕೊಡಲಾಗಿದೆ. ಮಿಕ್ಕಿರುವುದಕ್ಕೂ ಅವರುಗಳಿಂದ ಬಿಲ್ ಬಂದ ತಕ್ಷಣ ಕೊಡುವ ಏರ್ಪಾಡು ಮಾಡುತ್ತೇವೆ.

ಶ್ರೀ ಬಿ. ಜೆ. ಲಿಂಗೇಗೌಡ.—ಮಾನ್ಯ ಆಹಾರ ಮಂತ್ರಿಗಳು ಅವಶ್ಯಕತೆ ಇರುವ ಎಲ್ಲ ಗರ್ಭಿಣಿ ಸ್ತ್ರೀಯರಿಗೂ ಆಹಾರಪದಾರ್ಥಗಳನ್ನು ಒದಗಿಸಿಕೊಡಲಾಗುತ್ತದೆ ಎಂದು ಇಲ್ಲಿ ಹೇಳಿದ್ದರು. ಆ ರೀತಿ ಈಗ ಒದಗಿಸಿ ಕೊಡುತ್ತಿಲ್ಲ. ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲೆಲ್ಲಿ ಗರ್ಭಿಣಿ ಹೆಂಗನರು ಇದ್ದಾರೋ ಅವರಿಗೆಲ್ಲಾ ಕೊಡಬೇ ಕೆಂದು ಹೇಳಿರಲಿಲ್ಲ. ಎಲ್ಲ ನಿರ್ಗತಿಕರಾಗಿರುವ ಗರ್ಭಿಣಿ ಹೆಂಗನರು ಇರುತ್ತಾರೋ ಅಂತಹವರಿಗೆ ಆಹಾರಪದಾರ್ಥಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಎಲ್ಲ ಗರ್ಭಿಣಿ ಹೆಂಗನರಿಗೂ ಕೊಡುವುದು ಎಂದರೆ ಅದು ತಪ್ಪು. ಅವಶ್ಯಕತೆ ಇರತಕ್ಕ ನಿರ್ಗತಿಕರಾಗಿರುವ ಗರ್ಭಿಣಿ ಹೆಂಗನರಿಗೆ ಮಾತ್ರ ಕೊಡಬೇಕೆಂದು ಮಾಡಲಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೇರ್ ಸಂಸ್ಥೆಯವರು ಗರ್ಭಿಣಿ ಹೆಂಗನರಿಗಾಗಿ ಈಗ ಆಹಾರ ಪದಾರ್ಥಗಳನ್ನು ಕೊಟ್ಟು ಎಲ್ಲ ನಿರ್ಗತಿಕರಿಗೂ ಸಹಾಯ ಮಾಡುತ್ತಿದ್ದಾರೆ. ಇದರಿಂದ ಬಹಳ ಜನಕ್ಕೆ ಅನುಕೂಲವಾಗಿದೆ. ಇದನ್ನು ಈ ನವಂಬರು ಅಖೈರು ಹೊತ್ತಿಗೆ ನಿಲ್ಲಿಸಬೇಕೆಂದು ಮಾಡಿ ದ್ದಾರೆಂದು ಕೇಳುತ್ತೇವೆ. ಇದರಿಂದ ಬಹು ಜನಕ್ಕೆ ಅನುಕೂಲವಾಗುತ್ತಿರುವುದರಿಂದ ಇದನ್ನು ಇನ್ನೂ ಸ್ವಲ್ಪಕಾಲ ಮುಂದುವರಿಸುವುದಕ್ಕಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದನ್ನು ಈಗಾಗಲೇ ಯೋಚನೆ ಮಾಡಲಾಗಿದೆ.

ನಮಗೆ ಈಗಾಗಲೇ ಕೊಟ್ಟಿದ್ದ ಸುಮಾರು ನಾಲ್ಕು ಸಾವಿರ ಟನ್ ಮಿಲ್ಕ್ ಪೌಡರು, ಗೋಧಿ ಇವೆಲ್ಲಾ ಖಾಲಿಯಾಗಿವೆ. ಇದನ್ನು ಮುಂದುವರಿಸಲು ನಮಗೆ ಹಣ ಕೊಡುವವರು ಯಾರು ? ಇದಕ್ಕೆ ಈಗ ನಾವು ರೆಕ್ಕಾಚಾರ ಮಾಡಿರುವಂತೆ ಒಂದು ದಿನಕ್ಕೆ ಒಂದು ಲಕ್ಷ ರೂಪಾಯಿಗಳಷ್ಟು ಖರ್ಚು ಬೇಕಾಗುತ್ತದೆ. ಆದುದರಿಂದ ಇದನ್ನು ಇನ್ನೂ ಮುಂದುವರಿಸಲು ಸಾಧ್ಯವಿಲ್ಲ ಎನ್ನುವ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೇವೆ.

Sri SANJEEVANATH AIKALA.--Is it not a fact that the Observers sent by the CARE organisation as to the use of the Milk Powder they are giving has been misused on a large scale and whether the same thing has been reported to the CARE organisation and the Head Office after considering this report whether the CARE organisation has decided to end giving of aid to the Education Department and give only aid to the Church organisations ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಒಂದು ದೊಡ್ಡ ಪ್ರಮಾಣದಲ್ಲಿ ಮಾಡುವ ಯೋಜನೆ. ಇದರಿಂದ ಸುಮಾರು ಎಂಟು ಲಕ್ಷ ಮಕ್ಕಳಿಗೆ ಮಿಡ್ ಡೇ ಮೀಲ್ ನ್ ಕೊಡಲು ಅನುಕೂಲವಾಗಲಿ ಎಂದು ಮಾಡುತ್ತಿದ್ದೆವು. ಮೊದಲು ಇದನ್ನು ಎಜುಕೇಷನ್ ಇಲಾಖೆಯವರು ಅವರ ಸ್ಕೂಲುಗಳ ಮುಖಾಂತರ ಮಾಡಿಸುತ್ತಿದ್ದರು. ನಾವು ಕೂಡ ಅದೇ ಸ್ಕೂಲುಗಳವರನ್ನೇ ಉಪಯೋಗಿಸಿಕೊಂಡು ಈ ಯೋಜನೆಯನ್ನು ಮುಂದುವರಿಸುತ್ತಾ ಬರುತ್ತಿದ್ದೇವೆ. ಅದರಲ್ಲೂ ಇಂತಹ ದೊಡ್ಡ ಯೋಜನೆಗಳನ್ನು ಮಾಡುವಾಗ ಅಲ್ಲಲ್ಲಿ ದುರುಪಯೋಗಗಳಾಗಿವೆ ಎಂದು ದೂರು ಬರುತ್ತವೆ. ಕೆಲವು ಕಡೆಗಳಲ್ಲಿರುವ ನ್ಯೂನತೆಗಳಿಂದಾಗಿ ಬಂದಿರಬಹುದು. ಆದರೆ ಒಟ್ಟಿನಲ್ಲಿ ಈಗ ತಾನೆ ಶ್ರೀಮಾನ್ ಮುಕ್ಕಣ್ಣಪ್ಪನವರೇ ಹೇಳಿದ ಹಾಗೆ ಈ ಸ್ಕೀಂನಿಂದ ಬಹಳ ಜನರಿಗೆ ಸಮಾಧಾನವಾಗಿದೆ ಮತ್ತು ಇದನ್ನು ಇನ್ನೂ ಮುಂದುವರಿಸಬೇಕೆಂದು ಜನ ಕೇಳುತ್ತಿದ್ದಾರೆ. ಆದರೆ ನಮಗೆ ಮುಂದುವರಿಸಲು ಆಗುತ್ತಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಇದರ ಕೆಲಸಗಳು ಚೆನ್ನಾಗಿ ನಡೆಯುತ್ತಿವೆ. ಆದುದರಿಂದ ಈ ಯೋಜನೆಯನ್ನು ಡಿಸೆಂಬರು ಕೊನೆಯವರಿಗಾದರೂ ಮುಂದುವರಿಸುವುದಕ್ಕಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನಾಗಲೇ ಉತ್ತರ ಹೇಳಿದೆ. ಇದರಲ್ಲಿ ಬೇಕಾಗುವ ಪಾತ್ರೆಗಳಿಗಾಗಿ ಹಾಗೂ ಅಡಿಗೆ ಮಾಡುವುದಕ್ಕಾಗಿ ಒಬ್ಬರಿಗೆ ಕೊಡಲು ಒಂದು ದಿನಕ್ಕೆ ಒಂದೂವರೆ ಪೈಸೆ ಖರ್ಚು ಬರುತ್ತಿದೆ ಎಂದರೆ ಒಂದು ದಿನಕ್ಕೆ ಸುಮಾರು ಒಂದು ಲಕ್ಷದಷ್ಟು ಖರ್ಚು ಈಗ ಬರುತ್ತಿದೆ. ಮುಂದೆ ಇದರ ಜವಾಬುದಾರಿಯನ್ನು ಹೊರಲು ಸಾಧ್ಯವಿಲ್ಲ ಎಂದು ಇದನ್ನು ನಿಲ್ಲಿಸಬೇಕೆಂದು ಯೋಚನೆ ಮಾಡಲಾಗಿದೆ.

Amount sanctioned for Irrigation Works in Tiptur Taluk

*Q.—112. Sri K. P. REVANASIDDAPPA (Tiptur).—

Will the Minister for Revenue be pleased to state :—

(*a*) the amount sanctioned for new minor irrigation works in Tiptur taluk during the year 1964 up to-date with a view to meet shortages of food ;

(*b*) out of this the amount sanctioned towards the construction of new irrigation wells in Tiptur taluk during the above period ?

A. Sri M. V. KRISHNAPPA (Minister for Revenue).—

(*a*) Rs. 17,94,162.

(*b*) Rs. 39,200.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಇಷ್ಟೊಂದು ಹಣ ಖರ್ಚು ಮಾಡಿ ಬಾವಿಗಳನ್ನು ಮಾಡಲು ಸಾಲ ಕೊಟ್ಟಿದ್ದೀರಲ್ಲ ಇದರಿಂದ ಎಷ್ಟು ಎಕರೆಗಳಷ್ಟು ನೀರಾವರಿಯಾಯಿತು ಮತ್ತು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಈ ಬಾವಿಗಳಿಗಾಗಿ ಸಾಲ ಕೊಡುವುದನ್ನು ಮುಂದುವರಿಸುತ್ತೀರಾ ಹೇಗೆ ?